ದಿನಾಂಕ24.01.2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಎ ಬಿ ವಕೀಲರಿಂದಃ-**

ಅಪಘಾತವು ಬೆಳಿಗ್ಗೆ **10.30** ಗಂಟೆಗೆ ಸಂಭವಿಸಿರುತ್ತದೆ. ಅಪಘಾತದ ಸಂದರ್ಭದಲ್ಲಿ ನನ್ನ ಮಗ ತನ್ನ ಬೈಕ್ ಅನ್ನು ಚಲಾಯಿಸಿಕೊಂಡು ಬಾಳೆಲೆಯಿಂದ ಕಿರುಗೂರು ಗ್ರಾಮಕ್ಕೆ ಬರುತ್ತಿದ್ದನು. ಕಾರು ಎದುರು ದಿಕ್ಕಿನಲ್ಲಿ ಬಂದು ಬೈಕಿಗೆ ಮುಖಾಮುಖಿ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿ. ಅಪಘಾತವು ರಸ್ತೆಯ ಮಧ್ಯದಲ್ಲಿ ಆಗಿರುತ್ತದೆ ಎಂದರೆ ಸರಿ. ಅಪಘಾತದ ಸಂದರ್ಭದಲ್ಲಿ ನನ್ನ ಮಗ ಹೆಲ್ಮೆಟ್ ಅನ್ನು ಧರಿಸಿರುವುದಿಲ್ಲ ಎಂದರೆ ಸರಯಲ್ಲ. ನನ್ನ ಮಗ ಬೈಕ್ ಅನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿದ್ದರಿಂದ ಅಪಘಾತವು ಸಂಭವಿಸಿರುತ್ತದೆಯೇ ಹೊರತು, 1ನೇ ಎದುರುದಾರರು ಅಜಾಗರೂಕತೆಯಿಂದ ಸಂಭವಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಮಗನಿಗೆ ವಿವಾಹವಾಗಿರಲಿಲ್ಲ. ನನ್ನ ಮಗ ಜಾನಕಿ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನನ್ನ ಬಳಿ ದಾಖಲೆಗಳು ಇವೆ. ನಾನು ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು

ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮಗ ಜಾನಕಿ ಮಿಲ್ ನಲ್ಲಿ ಕೆಲಸ ಮಾಡುತ್ತಿರಲಿಲ್ಲ ಹಾಗೂ ತಿಂಗಳಿಗೆ ರೂ. 15,000/- ವೇತನ ಪಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಮೂರು ಜನ ಗಂಡು ಮಕ್ಕಳು. ನನ್ನ ಉಳಿದ ಇಬ್ಬರು ಗಂಡು ಮಕ್ಕಳು ಬೇರೆ ಕಡೆ ಪ್ರತ್ಯೇಕವಾಗಿ ವಾಸವಾಗಿದ್ದಾರೆ. ನನ್ನ ಮಗನಾದ ಮೃತ ಬಾಲ 9 ನೇ ತರಗತಿಯವರೆಗೆ ಓದಿದ್ದಾನೆ. ಅವನು ಮೃತನಾದಾಗ 22 ವರ್ಷ ವಯಸ್ಸಾಗಿತ್ತು. ನನ್ನ ಮಗನ ಜನನ ದಿನಾಂಕದ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಮಗ ಮೃತನಾದಾಗ ಅವನಿಗೆ 22 ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಾಗಿತ್ತು ಎಂದರೆ ಸರಿಯಲ್ಲ.

ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ನನ್ನ ಮೃತ ಮಗ ದುಂದು ವೆಚ್ಚ ಮಾಡುತ್ತಿದ್ದು, ಆತ ನನಗೆ ಯಾವುದೇ ಹಣವನ್ನು ನೀಡುತ್ತಿರಲಿಲ್ಲ ಹಾಗೂ ನಾನು ಆತನ ಆದಾಯದ ಮೇಲೆ ಅವಲಂಬಿತಳಾಗಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿಯನ್ನು ತಡವಾಗಿ ಸಲ್ಲಿಸಿರುವುದಕ್ಕೆ ಸಂಬಂಧಿಸಿದಂತೆ ಸಮಂಜಸವಾದ ಕಾರಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವಷ್ಟು ಪರಿಹಾರವನ್ನು ನೀಡಲು 3ನೇ ಎದುರುದಾರರು ಭಾದಸ್ಥರಲ್ಲ ಎಂದರೆ ಸರಿಯಲ್ಲ.

1 ಮತ್ತು 2 ನೇ ಎದುರುದಾರರ ಪರ ವಕೀಲರು ಗೈರುಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.